# ಸಲ್ಮಾನನ ಈದ್

ಸಲ್ಮಾನ್ ಖಾನ್ ಸಿನಿಮಾಗಳು ಈದ್ ಹಬ್ಬದಂದೇ ಬಿಡುಗಡೆಯಾಗುವ ಸಂಪ್ರದಾಯ ಆರಂಭವಾಗಿ ಕೆಲವು ವರ್ಷಗಳೇ ಉರುಳಿವೆ. ಈ ಹೊಸ 'ಈದ್ ಸಂಪ್ರದಾಯ' ಆರಂಭಿಸಿದ ಬಳಿಕ ಬಿಡುಗಡೆಯಾದ ಸಲ್ಲೂ ಮಿಯಾನ ಅಷ್ಟೂ ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಭರ್ಜರಿ ಕಲೆಕ್ಷನ್ ನಡೆಸಿವೆ. ಇದೀಗ ಈದ್ ಉಲ್ ಫಿತ್ರ್ ದಿನ ಬಿಡುಗಡೆಯಾದ ಹೊಸ ಚಿತ್ರ 'ಭಾರತ್' ಕೂಡಾ ಭರ್ಜರಿ ಆರಂಭ ಕಂಡಿದೆ. ಮೊದಲ ಮೂರು ದಿನದಲ್ಲೇ 98.5 ಕೋಟಿ ರೂಪಾಯಿ ಕಲೆಕ್ಷನ್ ಆಗಿದೆ. ಎರಡು ವಾರ ಓಡಿದರೆ 200 ಕೋಟಿ ಗಡಿ ದಾಟುವುದು ಖಚಿತ ಎಂದು ಬಾಕ್ಸಾಫೀಸ್ ಪಂಡಿತರು ಲೆಕ್ಕ ಹಾಕಿದ್ದಾರೆ.

ಸಲ್ಮಾನನ ಈ ಈದ್ ಸಂಪ್ರದಾಯ ಹಾಗೆಯೇ ಮುಂದುವರಿಯುವುದು ಖಚಿತವಾಗಿದೆ. ಆತ ಆಲಿಯಾ ಭಟ್ ಜೊತೆಗೆ ನಟಿಸುತ್ತಿರುವ 'ಇನ್‌ಶಾ ಅಲ್ಲಾಹ್' ಎಂಬ ಚಿತ್ರದ ಶೂಟಿಂಗ್ ಈಗಷ್ಟೇ ಶುರುವಾಗಿದೆ. ಆದರೆ ಅದರ ಬಿಡುಗಡೆ ದಿನಾಂಕ ಈಗಾಗಲೇ ಫಿಕ್ಸ್ ಆಗಿದೆ. 2020ರ ಈದ್ ಹಬ್ಬದ ದಿನವೇ 'ಇನ್‌ಶಾ ಅಲ್ಲಾಹ್' ಬಿಡುಗಡೆ ಆಗಲಿದೆ ಎಂದು ನಿರ್ಮಾಪಕರು ಈಗಾಗಲೇ ಪ್ರಕಟಿಸಿದ್ದಾರೆ. ■



# ಕೋಟಿವೀರ ಹೃತಿಕ್



ಎರಡು ವರ್ಷಗಳ ಬಳಿಕ ಹೃತಿಕ್ ರೋಷನ್ ಅಭಿನಯಿಸಿದ ಸಿನಿಮಾ ತೆರೆಗೆ ಬಂದು ಭರ್ಜರಿ ಆರಂಭವನ್ನೂ ಕಂಡಿದೆ. 'ಸೂಪರ್ 30' ಬಿಡುಗಡೆಗೆ ಮುನ್ನವೇ ಸಾಕಷ್ಟು ವಿವಾದವನ್ನು ಕಂಡ ಸಿನಿಮಾ. ವಿವಾದಗಳೇನೇ ಇದ್ದರೂ ಹೃತಿಕ್ ರೋಷನ್ ಇವತ್ತಿಗೂ ಬಾಲಿವುಡ್‌ನಲ್ಲಿ ಬಹುಬೇಡಿಕೆಯ ನಟ ಎನ್ನುವುದು ನಿಜ. ಹಾಗೆಂದೇ ಇದೀಗ ಹೃತಿಕ್ ಅಭಿನಯಿಸಲಿರುವ ಹೊಸ ಚಿತ್ರಕ್ಕೂ ನಿರ್ಮಾಪಕರು ಕೈಬಿಚ್ಚಿ ಖರ್ಚು ಮಾಡಲು ನಿರ್ಧರಿಸಿದ್ದಾರೆ. ಈ ಹೊಸ ಚಿತ್ರದಲ್ಲಿ ನಟಿಸಲು ಹೃತಿಕ್ 48 ಕೋಟಿ ರೂಪಾಯಿ ಸಂಭಾವನೆ ಪಡೆದಿದ್ದಾನಂತೆ!

ಇನ್ನೂ ಹೆಸರಿಡದ ಈ ಚಿತ್ರಕ್ಕೆ ಹೃತಿಕ್ ಜೊತೆಗೆ ಟೈಗರ್ ಶ್ರಾಫ್ ಕೂಡಾ ನಾಯಕ. ಇಬ್ಬರೂ ಸೇರಿದ ಮೇಲೆ ಇದೊಂದು ಆ್ಯಕ್ಷನ್ ಚಿತ್ರವೇ ಇರಬೇಕು ಎಂದು ನೀವು ಊಹಿಸಿದ್ದರೆ ಅದರಲ್ಲಿ ತಪ್ಪೇನೂ ಇಲ್ಲ; ಅದು ಆ್ಯಕ್ಷನ್ ಚಿತ್ರವೇ. ಸಾಮಾನ್ಯವಾಗಿ ಹೀರೊಗಳು ಸಂಭಾವನೆ ಕಡಿಮೆ ತೆಗೆದುಕೊಂಡು ಚಿತ್ರದ ಲಾಭದಲ್ಲಿ ಪಾಲು ಪಡೆಯುವುದು ಇತ್ತೀಚಿನ ವರ್ಷಗಳ ವಿದ್ಯಮಾನ. ಬಾಲಿವುಡ್ ಖಾನ್‌ತ್ರಯರ ಸಹಿತ ಹಲವರು ಈ ರೀತಿ ಮಾಡುತ್ತಾರೆ. ಆದರೆ ಹೃತಿಕ್ ಇವತ್ತಿಗೂ ದುಬಾರಿ ಸಂಭಾವನೆಯ ಹಳೇ ವಿಧಾನವನ್ನೇ ನೆಚ್ಚಿಕೊಂಡಿದ್ದಾನಂತೆ. ಹೊಸ ಚಿತ್ರಕ್ಕೂ ಅದೇ ನೀತಿ ಅನ್ವಯವಾಗಿದೆ.

ಟೈಗರ್ ಶ್ರಾಫ್ ಕೂಡಾ ಆ್ಯಕ್ಷನ್ ಹೀರೊ ಆಗಿ ತನ್ನದೇ ಆದ ಅಭಿಮಾನಿ ಬಳಗವನ್ನು ಹೊಂದಿದ್ದಾನೆ. ಆತನ ಹುರಿಗಟ್ಟಿದ ದೇಹ ಮತ್ತು ಒರಿಜಿನಲ್ ಆ್ಯಕ್ಷನ್‌ಗಳನ್ನು ನೋಡಲು ಯುವಜನರು ಥಿಯೇಟರಿಗೆ ಬರುತ್ತಾರೆ. ಇದರ ಜೊತೆಗೆ ಹೃತಿಕ್‌ನ ಡಾನ್ಸ್ ಸ್ಟೆಪ್‌ಗಳೂ ಸೇರಿದರೆ ಬಾಕ್ಸ್ ಆಫೀಸ್ ಯಶಸ್ಸು ಖಚಿತ ಎಂದು ನಿರ್ಮಾಪಕರು ನಂಬಿಕೊಂಡಿದ್ದಾರೆ. ಹಾಗೆಂದೇ ಹೃತಿಕ್‌ಗೆ 48 ಕೋಟಿ ರೂಪಾಯಿ ಸಂಭಾವನೆ ನೀಡಲು ಖುಷಿಯಿಂದ ಒಪ್ಪಿದ್ದಾರಂತೆ. ಈ ಚಿತ್ರದಲ್ಲಿ ನಟಿಸಲು ಟೈಗರ್ ಶ್ರಾಫ್ ಕೂಡಾ ಭಾರೀ ಮೊತ್ತದ ಸಂಭಾವನೆ ಪಡೆದಿದ್ದಾನೆಂದು ಸುದ್ದಿಯಿದೆ.

ಹೃತಿಕ್‌ಗೆ ಸಂಬಂಧಿಸಿ ಇನ್ನೊಂದು ಮಾತಿದೆ. ಆತನ ಸಿನಿಮಾಗಳ ಡಿಜಿಟಲ್ ರೈಟ್ಸ್ ಮತ್ತು ಆನ್‌ಲೈನ್ ರೈಟ್ಸ್‌ಗೆ ತುಂಬ ಬೇಡಿಕೆಯಿದೆ. ಜೊತೆಗೆ ಹೃತಿಕ್ ಸಿನಿಮಾದ ಕುರಿತು ಪ್ರೇಕ್ಷಕರಿಗೆ ಭಾರೀ ನಿರೀಕ್ಷೆ ಇರುವುದರಿಂದ ಆರಂಭದ ಬಾಕ್ಸಾಫೀಸ್ ಕಲೆಕ್ಷನ್ ಯಾವತ್ತೂ ಚೆನ್ನಾಗಿಯೇ ಇರುತ್ತದೆ. ಹಾಗಾಗಿಯೇ ಎರಡು ವರ್ಷಗಳ ವಿಶ್ರಾಂತಿಯ ಬಳಿಕವೂ ಹೃತಿಕ್ ಬೇಡಿಕೆಯನ್ನು ಹಾಗೆಯೇ ಉಳಿಸಿಕೊಂಡಿದ್ದಾನೆ.

■ ಬಿಂದು